# 2014-15 ನೇ ಸಾಲಿನ ಜೇನು ಕೃಷಿ (Pollination Support through Bee-Keeping) ಮಾರ್ಗಸೂಚಿ

**1. ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು :**

ಕರ್ನಾಟಕದ ವಾತಾವರಣ ಮತ್ತು ಮಣ್ಣಿನ ಗುಣಲಕ್ಷಣಗಳು ವಿವಿಧ ತೋಟಗಾರಿಕೆ ಬೆಳೆಗಳಿಗೆ ತುಂಬಾ ಅನುಕೂಲಕರವಾಗಿದ್ದು, ಸ್ವಾಭಾವಿಕ ಸಸ್ಯ ವರ್ಗಗಳು ಸಮೃದ್ಧವಾಗಿರುತ್ತದೆ. ತೋಟಗಾರಿಕೆ ಬೆಳೆಗಳಲ್ಲಿ ಉತ್ತಮ ಗುಣಮಟ್ಟದ ಇಳುವರಿಯನ್ನು ಪಡೆಯಲು ಪರಾಗಸ್ಪರ್ಶ ವೃದ್ಧಿಗಾಗಿ ಜೇನು ಕೃಷಿ ಉತ್ತೇಜಿಸಲು ಸಹಾಯಧನ ನೀಡುವ ಅವಕಾಶ ಇರುತ್ತದೆ.

ರಾಜ್ಯದಲ್ಲಿ ಜೇನು ಸಾಕಾಣಿಕೆಗೆ ಹೆಚ್ಚು ಪೂರಕ ವಾತವರಣವಿದ್ದು ವಿವಿಧ ಸಸ್ಯಗಳ ಹೂವುಗಳ ಲಭ್ಯತೆ ಉತ್ತೇಜನಕಾರಿಯಾಗಿವೆ. ಜೇನುಗಾರಿಕೆಯು ಸುಮಾರು 3000 ವರ್ಷಗಳಿಂದಲೂ ಬಳಕೆಯಲ್ಲಿರುವ ಗ್ರಾಮೀಣ ಉಪ ಕಸುಬು ಆಗಿರುತ್ತದೆ. ಶುದ್ದರೂಪದ ಜೇನುತುಪ್ಪದ ಬಳಕೆಯಿಂದ ಪೌಷ್ಠಿಕ ಅಂಶವನ್ನು ಪಡೆಯುವುದರ ಜೊತೆಗೆ ಅನೇಕ ಖಾಯಿಲೆಗಳನ್ನು ಗುಣಪಡಿಸಲು ಔಷಧಿಯನ್ನಾಗಿ ಬಳಸುವ ಪದ್ಧತಿ ಸಮಾಜದಲ್ಲಿ ಅನೇಕ ಶತಮಾನಗಳಿಂದ ರೂಢಿಯಲ್ಲಿದೆ.

**2. ಕಾರ್ಯಕ್ರಮದ ಉದ್ದೇಶ :**

ಜೇನು ಸಾಕಾಣಿಕೆಯಲ್ಲಿ ತೊಡಗಿರುವ ಜೇನು ಕೃಷಿಕರಿಗೆ ಹೆಚ್ಚಿನ ಸ್ವಾವಲಂಬನೆಯನ್ನು ಒದಗಿಸುವ ನಿಟ್ಟಿನಲ್ಲಿ ಜೇನು ಕೃಷಿಯು ಪ್ರಮುಖ ಪಾತ್ರ ವಹಿಸುತ್ತಿದೆ. ಜೇನು ಸಾಕಾಣಿಕೆಗೆ ಪ್ರೋತ್ಸಾಹ ನೀಡಿ ಪರಾಗ ಸ್ಪರ್ಶ ಕ್ರಿಯೆ ಹೆಚ್ಚಿಸುವ ಮೂಲಕ ತೋಟಗಾರಿಕೆ ಬೆಳೆಗಳಲ್ಲಿ ಉತ್ತಮ ಇಳುವರಿ ಪಡೆಯಲು ಹಾಗೂ ತನ್ಮೂಲಕ ರೈತ ಹಾಗೂ ರೈತ ಮಹಿಳೆಯರ ಆದಾಯವನ್ನು ಹೆಚ್ಚಿಸಬಹುದಾಗಿರುತ್ತದೆ.

**3. ಕಾರ್ಯಕ್ರಮದ ಮುಖ್ಯ ಘಟಕಗಳು :**

ಜೇನು ಕೃಷಿಗೆ ಹೆಚ್ಚು ಒತ್ತನ್ನು ನೀಡುವ ದೃಷ್ಟಿಯಿಂದ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿಯಲ್ಲಿ ಕೆಳಕಂಡ ಉತ್ತೇಜನ ಪೂರಕವಾದ ಮುಖ್ಯ ಘಟಕಗಳನ್ನು ಪರಿಗಣಿಸಲಾಗಿದೆ.

**ತೋಟಗಾರಿಕೆ ಬೆಳೆಗಳ ಇಳುವರಿ ಹೆಚ್ಚಿಸಲು ಪರಾಗ ಸ್ಪರ್ಶ ವೃದ್ಧಿಗಾಗಿ ಜೇನುಕೃಷಿ (Pollination support through Bee-Keeping).**

- ರೈತರು ಜೇನು ಸಾಕಾಣಿಕೆಯನ್ನು ಕೈಗೊಂಡು, ಪರಾಗಸ್ಪರ್ಶ ಪ್ರಕ್ರಿಯೆ ಹೆಚ್ಚಿಸಲು ತೋಟಗಾರಿಕೆ ಬೆಳೆಗಳಲ್ಲಿ ಜೇನು ಪೆಟ್ಟಿಗೆ ಘಟಕವನ್ನು ಸ್ಥಾಪಿಸಲು ಸಹಾಯಧನ ನೀಡಲಾಗುವುದು.
- ಸಾರ್ವಜನಿಕ ವಲಯದಡಿ ಪ್ರತಿ ಜೇನು ಘಟಕದ ವೆಚ್ಚ (Production of Nucleus stock) ರೂ. 20.00 ಲಕ್ಷಗಳಾಗಿದ್ದಲ್ಲಿ ಶೇ. 100 ರಷ್ಟು ಸಹಾಯಧನವನ್ನು ನೀಡಬಹುದು.
- ಒಂದು ಸೆಟ್ ಜೇನು ಫ್ರೇಮ್ (ಎಂಟು ಸಂಖ್ಯೆ) / ಕಾಲೋನಿಗೆ (Production of bee colonies) ಶೇ. 40 ರಷ್ಟು ಅಥವಾ ಗರಿಷ್ಟ ರೂ. 2000/- ಗಳಿಗೆ ಮಿತಿಗೊಳಿಸಿ ಸಹಾಯಧನ ನೀಡಬಹುದು.
- ಒಂದು ಸೆಟ್ ಜೇನು ಫ್ರೇಮ್ (ಎಂಟು ಸಂಖ್ಯೆ) / ಕಾಲೋನಿಗೆ (Production of bee colonies) ಶೇ. 40 ರಷ್ಟು ಅಥವಾ ಗರಿಷ್ಟ ರೂ. 2000/- ಗಳಿಗೆ ಮಿತಿಗೊಳಿಸಿ ಸಹಾಯಧನ ನೀಡಬಹುದು.
-
- ಒಂದು ಜೇನು ಪೆಟ್ಟಿಗೆಗೆ ಶೇ. 40 ರಷ್ಟು ಅಥವಾ ಗರಿಷ್ಟ ರೂ. 800/- ಗಳಿಗೆ ಮಿತಿಗೊಳಿಸಿ ಸಹಾಯಧನ ನೀಡಬಹುದು.
- ಈ ರೀತಿ ಪ್ರತಿ ಫಲಾನುಭವಿಗೆ ಗರಿಷ್ಟ 50 ಘಟಕಕ್ಕೆ ಸಹಾಯಧನ ನೀಡಬಹುದು. ಅಂದರೆ, ಪ್ರತಿ ಫಲಾನುಭವಿಗೆ ಗರಿಷ್ಟ ರೂ. 75,000/- ರವರೆಗೆ ಸಹಾಯಧನವನ್ನು ನೀಡಬಹುದಾಗಿದೆ.

**4. ಅನುದಾನ ಹಂಚಿಕೆ :**

**2014-15 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳು :**

| ಕ್ರ.ಸಂ. | ವಿವರಗಳು | ಭೌತಿಕ | ಆರ್ಥಿಕ (ರೂ. ಲಕ್ಷಗಳಲ್ಲಿ) |
|---|---|---|---|
| 1 | Production of bee colonies by bee breeder | 5 | 0.10 |
| 2 | Honey bee colony | 4000 | 32.00 |
| | Bee hives | 4000 | 32.00 |
| 3 | Equipment including Honey extractor -4 frame, food grade container -30 kg size, Net, including complete set of bee keeping equipment. | 94 | 7.52 |
| | **ಒಟ್ಟು** | **8099** | **71.62** |

**5. ತಾಂತ್ರಿಕ ವೈಶಿಷ್ಟತೆಗಳು :-**

- ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ಹಾಗೂ ತೇಗ / ಹೊನ್ನೆಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನುಸಂಸಾರ ಕೋಣೆ ಮತ್ತು ಜೇನುಕೋಣೆಯುಳ್ಳ ಜೇನುಪೆಟ್ಟಿಗೆಗಳನ್ನು ಮಾತ್ರ ಖರೀದಿಸತಕ್ಕದ್ದು.
- ಜೇನುಪೆಟ್ಟಿಗೆಯ ಅಳತೆ ಮತ್ತು ಗುಣ ಮಟ್ಟದ ಬಗ್ಗೆ ಜೇನು ಕೃಷಿ ಅಭಿವೃದ್ಧಿ ಅಧಿಕಾರಿಗಳು/ ಸಂಘಟಕರು ಇವರಿಂದ ದೃಢೀಕರಿಸಿದ ಬಗ್ಗೆ ಖಾತ್ರಿ ಮಾಡಿಕೊಳ್ಳತಕ್ಕದ್ದು.

**6. <u>ಸಹಾಯಧನ ಪಡೆಯಲು ಇರಬೇಕಾದ ಅರ್ಹತೆ :</u>**

- ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು (ನೋಟರಿರವರಿಂದ ನೋಂದಣಿಯಾಗಿರಬೇಕು). ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
- ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. (ಅರ್ಜಿ ತೋಉನಿ ಕಛೇರಿಯಲ್ಲಿಯೇ ಹಿಂತಿರುಗಿಸಬೇಕು).
- ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
- ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.
- ಜೇನು ಸಾಕಾಣಿಕೆ ಸೊಸೈಟಿ / ಖಾಸಗಿ ಸಂಸ್ಥೆಗಳು ಗುರುತಿಸಿದ ಫಲಾನುಭವಿಗಳಿಗೆ ಮಾರ್ಗಸೂಚಿಯನ್ವಯ ಸಹಾಯಧನವನ್ನು ನೀಡಬಹುದಾಗಿದೆ ಅಥವಾ ಯಾವುದೇ ಜೇನು ಸಾಕಾಣಿಕೆದಾರರು ವ್ಯಕ್ತಿಗತವಾಗಿ ಮುಂದೆ ಬಂದಲ್ಲಿ, ಅವರಿಗೂ ಸಹಾಯಧನ ನೀಡಬಹುದು.
- ಆಯಾ ವರ್ಷದಲ್ಲಿ ಹೊಸದಾಗಿ ಆಳವಡಿಸಿದ ಘಟಕಗಳಿಗೆ ಮಾತ್ರ ಸಹಾಯಧನ ನೀಡುವುದು.
- ಫಲಾನುಭವಿಯು ಜೇನುಕೃಷಿಗೆ ಈ ಹಿಂದೆ ರಾಜ್ಯ / ಕೇಂದ್ರ ಸರ್ಕಾರದ ಯಾವುದೇ ಯೋಜನೆಯಡಿ ಸದರಿ ಘಟಕಗಳಿಗೆ ಸಹಾಯಧನ ಪಡೆದಿದ್ದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಹಾಯಧನ ಪಡೆಯಲು ಅರ್ಹರಾಗಿರುವುದಿಲ್ಲ.
- ಈ ಕಾರ್ಯಕ್ರಮಕ್ಕೆ ಆಯ್ಕೆ ಆದ ಫಲಾನುಭವಿಗಳಿಗೆ, ಸೌಲತ್ತುಗಳನ್ನು ನೀಡವ ಮುನ್ನ ಜೇನು ಸಾಕಾಣಿಕೆ ಬಗ್ಗೆ ಅವಕಾಶವಿದ್ದಲ್ಲಿ ತರಬೇತಿ ನೀಡಲು ವ್ಯವಸ್ಥೆ ಮಾಡುವುದು. ಈ ಬಗ್ಗೆ ಸ್ಥಳೀಯವಾಗಿ ಅಥವಾ ಇತರೆ ಜಿಲ್ಲೆಗಳಲ್ಲಿರುವ ನುರಿತ ತಜ್ಞರ / ಸಂಸ್ಥೆಗಳ ನೆರವನ್ನು ಪಡೆದು ಅನುಷ್ಠಾನಗೊಳಿಸಬಹುದು.

- ಫಲಾನುಭವಿಯ ಹೆಸರಿನಲ್ಲಿ ಜಮೀನು ಇದ್ದು, ತೋಟಗಾರಿಕೆ ಬೆಳೆಗಳನ್ನು ಬೆಳೆದಿರಬೇಕು ಹಾಗೂ ಸಂಬಂದಿಸಿದ ಪಹಣಿಯು ಜನವರಿ-2014 ರ ನಂತರದ್ದಾಗಿರಬೇಕು.

7. **ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಯ ಆಯ್ಕೆ :**

- ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು NHM ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗದಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳಿಯ ಪತ್ರಿಕೆಗಳು, ವಿವಿಧ ಮಾಧ್ಯಮಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು.
- ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗದಿಪಡಿಸಿದ ಗುರಿ ಮತ್ತು ನಿಗದಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.
- **ಫಲಾನುಭವಿಯಿಂದ ಅಗತ್ಯ ದಾಖಲಾತಿಗಳನ್ನು ಹಿಸತೋನಿ/ಸತೋನಿ ಕಛೇರಿಯಲ್ಲಿ ಪಡೆದುಕೊಳ್ಳುವುದು. ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗದಿತ ದಿನಾಂಕದೊಂದಿಗೆ ಕಡ್ಡಾಯವಾಗಿ ವ್ಯಾಟ್ ಸಂಖ್ಯೆ / ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಬಿಲ್‌ನೊಂದಿಗೆ ಪಡೆದುಕೊಳ್ಳುವುದು.**

- ತಾಲ್ಲೂಕು ಹಿಸತೋನಿ / ಸತೋನಿ ರವರು ಅರ್ಜಿ ಹಾಗೂ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ, ಉದ್ದೇಶಿತ ಸ್ಥಳಕ್ಕೆ ಭೇಟಿ ನೀಡಿ, ಗುಣಮಟ್ಟ ಪರಿಶೀಲಿಸಿ, ಫಲಾನುಭವಿಯ ಸಮೇತ ಫೋಟೊ ತೆಗೆದು, ಫೋಟೊ ಹಾಗೂ ವರದಿಯನ್ನು ಸತೋಅ (RSK) ಹಾಗೂ ಹಿಸತೋನಿ ರವರ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ 5 ದಿನಗಳೊಳಗಾಗಿ ಸಲ್ಲಿಸುವುದು.
- ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಹಾಗೂ ತಾಲ್ಲೂಕಿನ ಅಧಿಕಾರಿಗಳು ಕಡ್ಡಾಯವಾಗಿ ತಾಕು ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.
- ಜಿಲ್ಲೆಯ ತೋಉನಿ (ಜಿಪಂ) ರವರು ಕಡ್ಡಾಯವಾಗಿ ಪರಿಶೀಲನೆ ಮಾಡುವುದು. ಸತೋನಿ / ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸತೋನಿ / ಹಿಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಛಾಯಾಚಿತ್ರಗಳನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕು.

- ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಟ ಶೇ. 50 ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ / ಹಿಸತೋನಿ ರವರು ಪರಿಶೀಲಿಸಬೇಕು. ಜಿಲ್ಲೆಯ ತೋಉನಿ (ಜಿಪಂ) ರವರು ಶೇ.5 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು.

**8. ಸಹಾಯಧನ ವಿತರಣೆ:**

- ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಪರಿಶೀಲನಾ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನ ಮೊತ್ತವನ್ನು ಬಿಡುಗಡೆ ಮಾಡುವುದು.
- ಘಟಕದ ಅಳವಡಿಕೆಯ ಪೂರ್ಣ ವೆಚ್ಚವನ್ನು ರೈತ ಫಲಾನುಭವಿಯು ಭರಿಸಿದ್ದಲ್ಲಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಖಾತೆಗೆ ECS / NEFT ಮುಖಾಂತರ ಅಥವಾ ECS ಸೌಲಭ್ಯ ವಿಲ್ಲದಿದ್ದಲ್ಲಿ ಅಂತಹ ಬ್ಯಾಂಕ್‌ನ ಮ್ಯಾನೇಜರ್ ಹೆಸರಿಗೆ ಚೆಕ್‌ನ್ನು ನೀಡಿ ಫಲಾನುಭವಿ ಖಾತೆಗೆ ಜಮಾ ಮಾಡುವುದು.
- ಜೇನುಕೃಷಿಯಲ್ಲಿ ಇಲಾಖೆಯ ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ LOGOನೊಂದಿಗೆ ಸಹಾಯಧನವನ್ನು ಪಡೆದಿರುವ ಬಗ್ಗೆ ವಿವರಗಳನ್ನು ಒಳಗೊಂಡಂತೆ ನಾಮಫಲಕವನ್ನು ಬರೆಸಬೇಕು.

**9. ಆರ್ಥಿಕ ಪ್ರತ್ಯಾಯೋಜನೆ ( Delegation of Power) :**

NHM ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ತೋಟಗಾರಿಕೆ ಉಪ ನಿರ್ದೇಶಕರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

**10. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು ( Reporting and documentation)**

- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗಿರುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ದಾಖಲಿಸಿ ಇವುಗಳ ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು **ಕ.ರಾ.ತೋ.ಮಿ.ಏ. ಬೆಂಗಳೂರು** ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.

ಮುಂದಿನ ಅದೇಶದವರೆಗೂ ಈ ಮಾರ್ಗಸೂಚಿಯು ಚಾಲ್ತಿಯಲ್ಲಿರುತ್ತದೆ.